**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 715/2023**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.02**

**ದಿನಾಂಕಃ 13.03.2026** **ಸಿಡಬ್ಲ್ಯೂ.04**

| | |
|---|---|
| ಹೆಸರು | ಪಾರ್ವತಮ್ಮ |
| ಗಂಡನ ಹೆಸರು | ಮಲ್ಲಿಕಾರ್ಜುನ |
| ವಯಸ್ಸು | 68 ವರ್ಷ |
| ಉದ್ಯೋಗ | ಮನೆ ಕೆಲಸ |
| ವಾಸ ಸ್ಥಳ | ಬೆಳ್ಳೂಡಿ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಆರೋಪಿತರ ಪರಿಚಯವಿದೆ. ಚಾಸಾ.1 ನನ್ನ ಸೊಸೆ. ಚಾಸಾ.2 ಮತ್ತು 3 ನಮ್ಮ ಊರಿನವರು. ಚಾಸಾ.5 ಮತ್ತು 6 ರವರ ಪರಿಚಯವಿದೆ. ಈಗ್ಗೆ 5 ವರ್ಷಗಳ ಹಿಂದೆ ರಾತ್ರಿ 9.00 ಗಂಟೆಗೆ ಸಂಗಯ್ಯ, ಈರಮ್ಮ, ಮಲ್ಲಿಕಾರ್ಜುನ, ಸರೋಜಮ್ಮ ಮತ್ತು ಚನ್ನೇಶ ರವರು ನಮ್ಮ ಮನೆ ಬಾಗಿಲಿಗೆ ಬಂದು ಮಿಂಡ್ರಿಗಾಳಿ ಎಂದು ನಿನಗೆ ನೋಡಿಕೊಳ್ಳುತ್ತೇನೆ ಎಂದು ಅವಾಚ್ಯ ಶಬ್ದಗಳಿಂದ ಬೈದರು. ನಾನು ಚಾಸಾ.1 ನನ್ನ ಸೊಸೆ ಮತ್ತು ಮಗ ಮನೆಯಲ್ಲಿದ್ದಾಗ ಕೇಕೆ ಹೊಡೆದು ನಿಮ್ಮನ್ನು ನೋಡಿಕೊಳ್ಳುತ್ತೇವೆ ಎಂದು ಜೀವ ಬೆದರಿಕೆ ಹಾಕಿದರು. ಸಂಗಯ್ಯನವರು ತಮ್ಮ ಕೈಯಿಂದ ನನ್ನ ಎದೆಗೆ ಹೊಡೆದರು. ಆರೋಪಿತರು ನನಗೆ ನನ್ನ ಸೊಸೆಗೆ ಹೊಡೆದರು ಹಾಗೂ ನನ್ನ ಸೊಸೆ ಚಾಸಾ.1 ರವರನ್ನು ಹಿಗ್ಗಾ ಬಗ್ಗಾ ಹಿಡಿದು ಎಳೆದಾಡಿದರು. ಜಾಡಿಸಿ ಒದ್ದರು. ನನ್ನನ್ನು ಎಳೆದಾಡಿದ್ದರಿಂದ ನನಗೆ ಪ್ರಜ್ಞೆ ಇರಲಿಲ್ಲ. ಗಲಾಟೆಯನ್ನು ಚಾಸಾ.5 ಮತ್ತು 6 ರವರು ಬಿಡಿಸಿರುತ್ತಾರೆ. ನಂತರ ನಾನು ನನ್ನ ಸೊಸೆ ಆಸ್ಪತ್ರೆಗೆ ಹೋಗಿ ಚಿಕಿತ್ಸೆಪಡೆದುಕೊಂಡಿರುತ್ತೇವೆ. ತದನಂತರ 10 ಗಂಟೆ ಸುಮಾರಿಗೆ ನನ್ನ ಸೊಸೆ ಠಾಣೆಗೆ ಹೋಗಿ ದೂರು ನೀಡಿರುತ್ತಾರೆ. ಮು.ಮಾ 1 ನನ್ನ ಸೊಸೆ ಗಲಾಟೆ ದಿನ ಧರಿಸಿದ್ದ ಬಟ್ಟೆ

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಕೆ ಸಿ ವಕೀಲರಿಂದಃ**

ಆರೋಪಿತರು ನನ್ನ ಸಂಬಂಧಿಕರು ಎಂದರೆ ಸರಿಯಲ್ಲ. ನಾವು ಮತ್ತು ಆರೋಪಿತರು ಒಂದೇ ಜನಾಂಗದವರು ಎಂದರೆ ಸರಿಯಲ್ಲ. ನಾವು ಮತ್ತು ಆರೋಪಿತರು ಸ್ವಾಮೇರ ಮನೆತನದವರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರು ಬಾನುವಳ್ಳಿಯವರು ನಾವು ಬನ್ನಿಕೋಡು ಗ್ರಾಮದವರು ಎಂದು ನುಡಿಯುತ್ತಾರೆ. ನಮಗೆ ಮತ್ತು ಆರೋಪಿತರ ನಡುವೆ ಜಾಗದ ವಿಚಾರವಾಗಿ

ಗಲಾಟೆಯಾಗಿತ್ತು ಎಂದರೆ ಸರಿ. ಸದರಿ ಜಾಗದ ವಿಚಾರವಾಗಿ ಡಿಸಿ ನ್ಯಾಯಾಲಯದಲ್ಲಿ ನಮ್ಮ ಮತ್ತು ಆರೋಪಿತರ ನಡುವೆ ವ್ಯಾಜ್ಯ ಇತ್ತು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ನಡೆದಿರಬಹುದು ಆದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿತರು ನಮ್ಮ ವಿರುದ್ದ ದೂರು ನೀಡಿದ ನಂತರ ನಾವು ಅವರ ವಿರುದ್ದ ದೂರು ನೀಡಿದ್ದೇವೆ ಎಂದರೆ ಸರಿ. ಗಲಾಟೆಯಾದ ದಿನವೇ ದೂರು ನೀಡಿರುತ್ತೇವೆ ಎಂದರೆ ಸರಿ. ಸಾಕ್ಷಿಗೆ ಅವರ ಹೇಳಿಕೆಯ ಭಾಗ ಗಲಾಟೆ ಸಂದರ್ಭದಲ್ಲಿ... ............ ಪಡೆದುಕೊಂಡಿರುವುದಿಲ್ಲ ಎಂದು ಹೇಳಿಕೆ ನೀಡಿದ್ದೀರಾ ಎಂದರೆ ಸಾಕ್ಷಿಯು ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಗುರುತಿಸಲು ನಿರಾಕರಿಸಿದ ಸದರಿ ಭಾಗವನ್ನು ನಿಡಿ.1 ಎಂದು ಹಾಗೂ ಹೇಳಿಕೆಯ ಭಾಗವನ್ನು ನಿಡಿ.1(ಎ) ಎಂದು ಗುರುತಿಸಲಾಯಿತು. ಆರೋಪಿತರು ಸಹ ನಮ್ಮ ವಿರುದ್ದ ದೂರು ನೀಡಿದ್ದಾರೆ ಎಂದರೆ ಸರಿ. ಸದರಿ ಪ್ರಕರಣ ಸಂಖ್ಯೆ ಸಿಸಿ 713/2023 ಇದೇ ನ್ಯಾಯಾಲಯದಲ್ಲಿ ಚಾಲ್ತಿ ಇದೆ ಎಂದರೆ ಸರಿ. ಆರೋಪಿತರು ನಮ್ಮೊಂದಿಗೆ ಯಾವುದೇ ರೀತಿ ಗಲಾಟೆ ಮಾಡಿಲ್ಲ, ಹಲ್ಲೆ ಮಾಡಿಲ್ಲ ಮತ್ತು ನನ್ನ ಸೊಸೆಯನ್ನು ಹಿಡಿದು ಎಳೆದಾಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಮತ್ತು ನಮ್ಮ ನಡುವೆ ಸಂಬಂದ ಇದ್ದು ಆಸ್ತಿ ವಿಚಾರವಾಗಿ ಜಗಳ ಆಗಿದ್ದರಿಂದ ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗಲಾಟೆಯನ್ನು ಬಸವರಾಜ ಮತ್ತು ಅಂಜಿನಪ್ಪ ಬಂದು ಜಗಳ ಬಿಡಿಸಿದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನಾನು ನನ್ನ ಸೊಸೆ ಆಸ್ಪತ್ರೆಗೆ ಹೋದ ಬಗ್ಗೆ ಯಾವುದೇ ದಾಖಲಿ ಸಲ್ಲಿಸಿಲ್ಲ ಎಂದರೆ ಸಾಕ್ಷಿಯು ಪೊಲೀಸರು ಸಲ್ಲಿಸಿಲ್ಲ ಎಂದು ನುಡಿಯುತ್ತಾರೆ. ಯಾವುದೇ ಗಲಾಟೆ ಆಗಿಲ್ಲ, ನಾವು ಆಸ್ಪತ್ರೆಗೆ ಹೋಗೇ ಇಲ್ಲ ಎಂದರೆ ಸರಿಯಲ್ಲ. ಮು.ಮಾ 1 ಚಾಸಾ.1 ರವರು ಗಲಾಟೆ ದಿನ ಧರಿಸಿದ ಬಟ್ಟೆ ಅಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ